ರಾಮಣ್ಣ: ನಿನ್ನೆ ಬೆಳಿಗ್ಗೆ ನಿಮ್ಮೂರಲ್ಲಿ ಬೆಂಕಿ ಅನಾಹುತದಲ್ಲಿ ನಾಲ್ಕು ವಾಹನಗಳ ಸಹಿತ ಒಂದು ಕಟ್ಟಡ ಸುಟ್ಟು ಬೂದಿಯಾಯಿತಂತಲ್ಲ, ಯಾವುದದು?

ಭೀಮಪ್ಪ: ಅಗ್ನಿಶಾಮಕ ದಳದ ಕಚೇರಿ.

***

ನಿನ್ನೆ ನೀನು ಹೋಗಿದ್ದ ದುರಂತ ನಾಟಕ ಸುಖಾಂತವೋ, ದುಃಖಾಂತವೋ?

ಸುಖಾಂತ

ಅದು ಹೇಗಯ್ಯ?

ನಾಟಕ ಮುಗಿದಾಗ ಅಂತೂ ಮುಗಿಯಿತಲ್ಲ, ಎಂದು ಪ್ರೇಕ್ಷಕರು ಆನಂದದಿಂದ ಚಪ್ಪಾಳೆ ತಟ್ಟಿ ಸಂಭ್ರಮಿಸಿಬಿಟ್ಟರು!

***

ರಾಜಕಾರಣಿ ಪತ್ರಿಕಾ ಸಂಪಾದಕರಿಗೆ ಫೋನಾಯಿಸಿದ್ದ, ಏನ್ರೀ, ನಾನು ಕಳ್ಳ ಗಂಟು ಹೊಡೆಯುವವ ಎಂದು ನಿಮ್ಮ ಪತ್ರಿಕೆಯಲ್ಲಿ ಮುದ್ರಿಸಿದ್ದೀರಂತಲ್ಲ?

ಕ್ಷಮಿಸಿ ಸಾರ್, ಅದು ನಮ್ಮ ಪತ್ರಿಕೆಯಲ್ಲ. ಅಷ್ಟಕ್ಕೂ ನಾವು ಎಲ್ಲರಿಗೂ ಗೊತ್ತಿರುವ ಹಳೆಯ ಸಂಗತಿಗಳನ್ನು ಮುದ್ರಿಸುವುದಿಲ್ಲ.

***

ಸಾರ್, ಈ ಕಲಾವಿದರು ಅದ್ಭುತ ಚಿತ್ರಗಾರರು, ಅರ್ಧ ಗಂಟೆಯಲ್ಲಿ ನಗುಮೊಗದ ಚಿತ್ರವನ್ನು ಅಳುಮೊಗವನ್ನಾಗಿ ಮಾಡಬಲ್ಲರು!

ಅದೇನು ಮಹಾ ಸ್ವಾಮಿ? ನನ್ನ ಪತ್ನಿ ಅದನ್ನು ಎರಡೇ ನಿಮಿಷದಲ್ಲಿ ಮಾಡಬಲ್ಲಳು!

***

ಸ್ವಾಮಿ ನಿಷ್ಠ ಬೊಮ್ಮಾಯಿ



ರೀ, ನನ್ನನ್ನು ರೇಗಿಸಬೇಡಿ. ನಿಮಗಿಂತ ಮೊದಲು ನನ್ನನ್ನು ನೋಡಲು ಹತ್ತು ವರಗಳು ಬಂದಿದ್ದವು ಗೊತ್ತಾ?

ಅವುಗಳಲ್ಲಿ ಒಂದು ಹಂದಿಯನ್ನೇ ಕಟ್ಟಬೇಕಿತ್ತು ನಿನಗೆ...

ಮತ್ತೆ ನಾನೀಗ ಅದನ್ನೇ ಮಾಡಿರೋದು!

***

ರಜನಿ: ರೀ, ವಿಮಲಾ ಇವರ ಜೋಕುಗಳು ಸಕತ್ತಾಗಿರುತ್ತವೆ. ನಕ್ಕೂ ನಕ್ಕೂ ಸತ್ತೇ ಹೋಗ್ತೀವಿ.

ವಿಮಲಾ: ಹೌದೇ. ತಡೀರಿ ನಮ್ಮತ್ತೇನ ಇಲ್ಲಿಗೆ ಕಳಿಸ್ತೀನಿ.

***

ಮಕ್ಕಳ ದಿನಾಚರಣೆಯಂದು ಮಕ್ಕಳಿಗೆ ಉಚಿತ ವೈದ್ಯಕೀಯ ಪರೀಕ್ಷೆ ನಡೆದಿತ್ತು. ಮಗು, ನಿನಗೆ ಕಿವಿ, ಮೂಗುಗಳ ತೊಂದರೆಯೇನಾದರೂ ಇದೆಯೇ?

ಹೌದು ಡಾಕ್ಟರ್, ಪ್ರತಿಸಲ ಟೀ ಶರ್ಟ್ ಹಾಕೋವಾಗ ಅವು ಅಡ್ಡ ಬರುತ್ತವೆ!

***

ಪ್ರೊಫೆಸರ್: ಮೆಡಿಕಲ್ ಕಾಲೇಜುಗಳಲ್ಲಿ ಏನನ್ನು ಕಲಿಸುತ್ತಾರೆ?

ವಿದ್ಯಾರ್ಥಿ: ಮಾತ್ರೆ ಚೀಟಿ ಅರ್ಥವಾಗದಂತೆ, ಬಿಲ್‌ಗಳನ್ನು ಅರ್ಥವಾಗುವಂತೆ ಬರೆಯುವುದು.

***

ಪ್ರೊಫೆಸರ್: ವಿದ್ಯಾರ್ಥಿಗಳು ಕಲಿಯುವುದೇನು?

ವಿದ್ಯಾರ್ಥಿ: ಪರೀಕ್ಷೆಯಲ್ಲಿ ಅರ್ಥವಾಗದಂತೆ ಬರೆಯುವುದು, ಅರ್ಥವಾಗುವಂತೆ ರಮ್ಯವಾಗಿ ಹೊಗಳಿ ಲವ್‌ಲೆಟರ್ ಬರೆಯೋದು ಸಾರ್!

***

ಆಕೆ: ಮೊನ್ನೆಯಿಂದ ಕೆಲಸದವಳನ್ನು ಬರಬೇಡವೆಂದು ಹೇಳಿದ್ದೇನೆ.

ಈಕೆ: ಅದೇನು? ಬಹಳ ಚೂಟಿಯಾಗಿದ್ದಳಲ್ಲ!

ಆಕೆ: ಹೌದುರೀ, ನಮ್ಮ ಯಜಮಾನರೂ ಹಾಗೇ ಹೇಳೋಕೆ ಶುರುಮಾಡಿದ್ರು, ಅದಕ್ಕೇ..!

***

ಟೀಚರ್: ಅವನೀಶ, ಭೂಮಿ ಗುಂಡಾಗಿದೆ ಎಂಬುದನ್ನು ಹೇಗೆ ಸಾಧಿಸಿ ಹೇಳ್ತಿಯಾ?

ಅವನೀಶ: ನಾನೆಲ್ಲಿ ಹಾಗೆ ಹೇಳಿದೆ ಮಿಸ್? ನಿನ್ನೆ ನೀವೇ ತಾನೇ ಹಾಗೆ ಹೇಳಿದ್ದು?

(ಸಂಗ್ರಹ) ಕೆ. ಶ್ರೀನಿವಾಸರಾವ್, ಹರಪನಹಳ್ಳಿ

ತಿಮ್ಮ: ಏನಪ್ಪಾ, ಮಡಕೆಯಲ್ಲಿ ಬೂದಿ ತಗೊಂಡು ನದಿಗೆ ಬಿಡಲು ಹೋಗ್ತಿದಿಯಾ?

ಗುಂಡ: ನಮ್ಮ ತಾತನದ್ದು ಕಣಯ್ಯಾ.

ತಿಮ್ಮ: ಪಾಪ ಕೊರೊನಾ ಆಗಿತ್ತು ಅಂತಾ ಕಾಣಿಸುತ್ತೆ.

ಗುಂಡ: ಕೊರೊನಾನೂ ಇಲ್ಲ, ಎಂತದ್ದು ಇಲ್ಲ. ನಮ್ಮ ತಾತ ಸಿಗರೇಟ್ ಸೇದಿ ಈ ಮಡಕೆಯಲ್ಲಿ ಹಾಕಿದ ಬೂದಿ.

***

(ಮಗನ ಜೊತೆ ಮಾರ್ಕೆಟ್‌ಗೆ ಹೋಗಿದ್ದ)

ಗುಂಡ: ಲೇಯ್... ಕಣ್ಣು ಯಾಕೇ ಮುಚ್ಚಿಕೊಂಡು ನಡೀತಾ ಇದೀಯಾ? ಎಡವಿ ಬಿದ್ರೆ ಗಾಯ ಆಗುತ್ತೆ ಹುಷಾರು.

ಮರಿಗುಂಡ: ಅಪ್ಪಾ, ನೀನೇ ಬೆಳಿಗ್ಗೆ ಮನೆ ಬಿಡುವಾಗ ಹೇಳಿದ್ದೆ, ಮಾರ್ಕೆಟ್‌ನಲ್ಲಿ ಹುಷಾರಾಗಿ ಇರಬೇಕು. ಇಲ್ದೇ ಇದ್ರೆ ವ್ಯಾಪಾರಿಗಳು ಕಣ್ಣಿಗೆ ಮಣ್ಣೆರಚಿ ಬಿಡ್ತಾರೆ ಅಂತಾ.

***

ಗುಂಡ: ಆರೋಗ್ಯ ಚೆನ್ನಾಗಿ ಇರೋಕೆ ಏನು ಮಾಡಬೇಕು ಡಾಕ್ಟ್ರೇ?

ಡಾಕ್ಟರ್: ವೆರಿ ಸಿಂಪಲ್, ನಿದ್ದೆ ಮಾಡುವ ಮುಂಚೆ 20 ನಿಮಿಷ ವಾಕ್ ಮಾಡಿಸಾಕು.

ಗುಂಡ: ಅಯ್ಯೋ ಅದು ನಂಗೂ ತುಂಬಾ ಇಷ್ಟವೇನೇ. ಆದ್ರೆ ನಮ್ ಬಾಸು ಲಂಚ್ ಆದ್ಮೇಲೆ ವಾಕ್ ಮಾಡಕ್ಕೇ ಬಿಡಲ್ಲ ಡಾಕ್ಟ್ರೇ.

***

ಬ್ಯಾಂಕ್ ಮೆನೇಜರ್: ನಮ್ಮ ಬ್ಯಾಂಕ್‌ನಲ್ಲಿ ಈ ವರ್ಷ ಕೊರೊನಾ ಪ್ರಯುಕ್ತ ನಿಮಗೆ 'ಇಂಟರೆಸ್ಟ್' ಇಲ್ಲದೇ ಸಾಲ ಕೊಡಲು ತೀರ್ಮಾನಿಸಿದ್ದೇವೆ.

ಗುಂಡ: ಅಯ್ಯೋ ಕರ್ಮವೇ? ನಿಮಗೆ 'ಇಂಟ್ರೆಸ್ಟ್' ಇಲ್ಲದೇ ಹೋದರೆ ಸಾಲ ಬೇರೇ ಯಾಕೇ ಕೊಡ್ತೀರಿ ಹೋಗಲಿ ಬಿಡಿ ಸಾರ್.

***

ಗುಂಡ: (ಮಗಳಿಗೆ) ಏನೇ ಇಷ್ಟು ದಿವಸ ನನ್ನನ್ನು ಬಾಯಿ ತುಂಬಾ ಅಪ್ಪ ಅಂತಾ ಕರೀತಾ ಇದ್ದೋಳು ಇವತ್ತು ಯಾಕೇ ಡ್ಯಾಡೀ ಅಂತ ಕರೀತಾ ಇದ್ದೀಯ?

ಮರಿ ಸುಬ್ಬಿ: ಅಯ್ಯೋ ಅಷ್ಟೇನಾ. ಈಗ ಏನಾದ್ರೂ 'ಅಪ್ಪ' ಅಂದ್ರೆ ನನ್ ಲಿಪ್ ಸ್ಟಿಕ್ ಹಚ್ಚಿಕೊಂಡಿರುವುದು ಹಾಳಾಗಿ ಬಿಡುತ್ತೆ ಅದಕ್ಕೆ 'ಡ್ಯಾಡಿ' ಅಂತಿರೋದು.

***

ಮರಿಗುಂಡ: ಅಪ್ಪಾ, ನೀನು ಒಂದು ವಾರದ ಹಿಂದೆ ನನಗೆ ತಂದು ಕೊಟ್ಟಿದ್ದ ಗುಲಾಬಿ ಗಿಡ ನಾನು ನೆಟ್ಟು ಒಂದು ತಿಂಗಳು ಆದ್ರೂ ಒಂದು ಬೇರು ಬಿಟ್ಟಿಲ್ಲ?

ಗುಂಡ: ಎಲಾ ಇವನಾ... ಅದು ನಿನಗೆ ಹೇಗೆಗೊತ್ತಾಯಿತು?

ಮರಿ ಗುಂಡ: ಹೌದು ಕಣಪ್ಪಾ, ನಾನು ದಿನ ಬೆಳಿಗ್ಗೆ ಅದನ್ನಕಿತ್ತು... ಕಿತ್ತೂ ನೋಡ್ತಾ ಇದಿನೀ.

***

ಸುಬ್ಬಿ: ರೀ... ನಿಮಗೆ ಎಷ್ಟು ಸಲ ಹೇಳೋದು, ಮಧ್ಯಾಹ್ನದ ಹೊತ್ತು ಹತ್ತು ಮನೆಗೆ ಕೇಳೋ ಹಾಗೆ ಗೊರಕೆ ಹೊಡೀಬೇಡಿ ಅಂತ. ಈಗ ನೋಡಿ ಏನಾಗಿದೆ ಅಂತ ಗೊತ್ತಾ?

ಗುಂಡ: ಅಯ್ಯೋ ಕರ್ಮವೇ, ಏನಾಯ್ತು ಅಂತಾ ಹೇಳೇ ಮಾರಾಯ್ತಿ?

ಸುಬ್ಬಿ: ನಮ್ಮ ಮನೆಯಲ್ಲಿ ದೋಸೆ. ಇಡ್ಲಿ ಹಿಟ್ಟು ರುಬ್ಬೋ ಮೆಷೀನ್ ಇದೆ ಅಂತಾ ಗೊತ್ತಾಗಿ ಅಕ್ಕ ಪಕ್ಕದ ಮನೆಯವರು ಹಿಟ್ಟು ರುಬ್ಬಿ ಕೊಡಿ ಅಂತಾ ಅಕ್ಕಿ/ಉದ್ದಿನ ಬೇಳೆ ಪಾತ್ರೆಗಳನ್ನು ಇಟ್ಟು ಹೋಗಿದ್ದಾರೆ.

(ಸಂಗ್ರಹ) ಆರ್. ವೀರೇಶ್ ಕುಮಾರ್, ಬೆಂಗಳೂರು